ನಿಯಮ -330
ಕ್ರ. 84 ಹಂ ...

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ. ಎನ್. ರವಿಕುಮಾರ್, ಶಶೀಲ್ ಜಿ ನಮೋಶಿ, ಶ್ರೀ ಡಿ.ಎಸ್. ಅರುಣ್, ಶ್ರೀ ಕೆ.ಎಸ್. ನವೀನ್ ಹಾಗೂ ಶ್ರೀ ಎಸ್.ರುದ್ರೇಗೌಡ ರವರು ನಿಯಮ-330 ರಡಿಯಲ್ಲಿ ನೀಡಿರುವ ಸೂಚನೆಗೆ ಉತ್ತರ.**

ಪ್ರಶ್ನೆ : ರಾಜ್ಯದ ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ದಾವಣಗೆರೆ ನಗರದ ಕಲ್ಲೇಶ್ವರ ರೈಸ್‌ಮಿಲ್ ಆವರಣದ ಫಾರಂ ಹೌಸ್‌ನಲ್ಲಿ ಕಾಡುಪ್ರಾಣಿಗಳು ಹಾಗೂ ಅಕ್ರಮವಾಗಿ ಇಟ್ಟಿದ್ದ ಮೃತ ಪ್ರಾಣಿಗಳ ಮೂಳೆ, ದಂತ, ಕೊಂಬು, ಚರ್ಮ, ಮುಳ್ಳುಗಳು ಪತ್ತೆಯಾಗಿದ್ದು, ಸದರಿ ರೈಸ್‌ಮಿಲ್ ದಾವಣಗೆರೆಯ ಸ್ಥಳೀಯ ಶಾಸಕರ ಒಡೆತನದಲ್ಲಿರುತ್ತದೆ. ಜಿಂಕೆ ಚರ್ಮ, ಕೊಂಬು ಇತರೆಗಳ ಬಗ್ಗೆ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರ ಗಮನಕ್ಕೆ ತಂದಿದ್ದರೂ, ಆರೋಪಿಗಳನ್ನು ಇನ್ನು ಬಂಧಿಸಿದುವುದಿಲ್ಲ. ಈ ಪ್ರಕರಣದ ಬಗ್ಗೆ ವಿಸ್ತಾರ ಮಾಹಿತಿಯನ್ನು ನೀಡುವಂತೆ ನ್ಯಾಯಾಲಯ ಸೂಚಿಸಿದೆ. ಕಾಡು ಪ್ರಾಣಿಗಳು ಹಾಗೂ ಅವುಗಳ ಚರ್ಮ ಕೊಂಬು ಇತ್ಯಾದಿಗಳನ್ನು ಸಂಗ್ರಹಿಸಿಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಈ ಬಗ್ಗೆ ಅರಣ್ಯ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಹಾಗೂ ಜಿಲ್ಲಾಡಳಿತವು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ರೈಸ್‌ಮಿಲ್ ಆವರಣದ ಫಾರಂಹೌಸ್‌ನಲ್ಲಿ ಸಾಕಿರುವ ಕಾಡುಪ್ರಾಣಿಗಳ ಜವಾಬ್ದಾರಿಯು ಮಾಲೀಕರ ಮೇಲೆ ಇರುತ್ತದೆ. ಆದರೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರಾಪರಾಧಿಗಳನ್ನು ಬಂಧಿಸಲಾಗಿದೆ. ಆದರೆ ನಿಜವಾದ ಆರೋಪಿಗಳನ್ನು ಇದುವರೆವಿಗೂ ಬಂಧಿಸಿರುವುದಿಲ್ಲ. ಈ ಪ್ರಕರಣವನ್ನು ಮುಚ್ಚಿಹಾಕದೇ ಅಮಾಯಕರನ್ನು ಬಲಿ ಪಶುಮಾಡದೇ ರೈಸ್‌ಮಿಲ್ ಮಾಲೀಕರನ್ನು ತನಿಖೆಗೊಳಪಡಿಸಿ, ಬಂಧಿಸಿ ಭಾಗಿದಾರರಾದ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನು ತನಿಖೆಗೊಳಪಡಿಸುವ ಬಗ್ಗೆ.

ಉತ್ತರ: ದಿನಾಂಕ 17.12.2022 ರಂದು ಮಧ್ಯಾಹ್ನ 3.00 ಗಂಟೆಗೆ ಸಿ.ಸಿ.ಬಿ ಪೊಲೀಸ್ ಇನ್ಸ್‌ಪೆಕ್ಟರ್, ಚಂದ್ರಕಲಾ ಎಂ.ಬಿ ರವರಿಗೆ ಹೆಬ್ಬಾಳ ಪೊಲೀಸ್ ಠಾಣಾ ಸರಹದ್ದಿಗೆ ಸೇರುವ ಹೆಬ್ಬಾಳ, ಬಳ್ಳಾರಿ ರಸ್ತೆ, ನಂ 19 ಎಸ್.ವಿ ಕಾಂಪ್ಲೇಕ್ಸ್ ಮುಂದೆ ಯಾರೋ ಒಬ್ಬ ಆಸಾಮಿಯು ವನ್ಯ ಜೀವಿಗಳ ಚರ್ಮ, ಕೊಂಬು ಮತ್ತು ದಂತಗಳನ್ನು ಮಾರಾಟ ಮಾಡಲು ಗಿರಾಕಿಗಳಿಗಾಗಿ ಕಾಯುತ್ತಿರುವುದಾಗಿ ಬಾತ್ಮೀದಾರರಿಂದ ಬಂದ ಖಚಿತ ಮಾಹಿತಿ ಮೇರೆಗೆ ಸದರಿ ಸ್ಥಳಕ್ಕೆ ಅಗತ್ಯ ಪರಿಕರಗಳೊಂದಿಗೆ, ಪಂಚರು ಮತ್ತು ಸಿಬ್ಬಂದಿಯವರೊಂದಿಗೆ ತೆರಳಿ ಸದರಿ ಸ್ಥಳದಲ್ಲಿ ಒಂದು ಕೈ ಚೀಲದಲ್ಲಿ ವಸ್ತುಗಳನ್ನು ಇಟ್ಟುಕೊಂಡು ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಅಸಾಮಿಯ ಮೇಲೆ ದಾಳಿ ಮಾಡಿ ಆಸಾಮಿಯನ್ನು ಸುತ್ತುವರೆದು ಹಿಡಿದು ವಿಚಾರಿಸಲಾಗಿ, ಸೆಂದಿಲ್ ಬಿನ್ ವೇಲು, ವಯಸ್ಸು 40 ವರ್ಷ, ವಾಸ ನಂ 627, ಬೆತ್ತೂರು ರಸ್ತೆ, ಬಸವೇಶ್ವರ ದೇವಸ್ಥಾನದ ಹತ್ತಿರ, ಆನೆಕೊಂಡ, ದಾವಣಗೆರೆ ಎಂದು ತಿಳಿಸಿದ ಮೇರೆಗೆ ಪಂಚರ ಸಮಕ್ಷಮ ಆಸಾಮಿಯ ಬಳಿ ಇದ್ದ ಬ್ಯಾಗನ್ನು ಪರಿಶೀಲನೆ ಮಾಡಲಾಗಿ ಬ್ಯಾಗ್ ನಲ್ಲಿ 1] ಎರಡು ಕೃಷ್ಣ ಮೃಗದ ಕೊಂಬುಗಳು, 2] ಐದು ಕಾಡು ಹಂದಿಯ ಕೊರೆ ಹಲ್ಲು (ದಂತಗಳು) 3] ಚುಕ್ಕೆಯ ಜಿಂಕೆ ಚರ್ಮ, 4] ಮುಳ್ಳಂದಿಯ ಎರಡು ಮುಳ್ಳುಗಳು ಇದ್ದು, ಈ ಬಗ್ಗೆ ವಿಚಾರಿಸಲಾಗಿ ಈತನಿಗೆ ಪರಿಚಯವಿರುವ ದಾವಣಗೆರೆ ವಾಸಿಗಳಾದ ಮಾರಿಯಪ್ಪ ಮತ್ತು ಸುಂಚ @ ಕಾಡುಸುಂಚ ಎಂಬುವರುಗಳು ತಂದು ಕೊಟ್ಟು, ಮಾರಾಟ ಮಾಡಿ ಬಂದ ಹಣವನ್ನು ಹಂಚಿಕೊಳ್ಳುವುದಾಗಿ ತಿಳಿಸಿ ಕೊಟ್ಟ ವಸ್ತುಗಳನ್ನು ಮಾರಾಟ ಮಾಡಲು ತಂದಿರುವುದಾಗಿ ತಿಳಿಸಿರುತ್ತಾನೆ.

ನಂತರ ಆಸಾಮಿಯು ಮಾರಾಟ ಮಾಡಲು ತಂದಿದ್ದ 1] ಎರಡು ಕೃಷ್ಣ ಮೃಗದ ಕೊಂಬುಗಳು 2] ಐದು ಕಾಡು ಹಂದಿಯ ಕೊರೆ ಹಲ್ಲು (ದಂತಗಳು) 3] ಚುಕ್ಕೆಯ ಜಿಂಕೆ ಚರ್ಮ, 4] ಮುಳ್ಳಂದಿಯ ಎರಡು ಮುಳ್ಳುಗಳು 5] ಆರೋಪಿಯ ವಶದಲ್ಲಿದ್ದ ಸೇವಿ ಬ್ಲೂ ಬಣ್ಣದ ಓಪ್ಪೋ ಕಂಪನಿಯ ಅಂಡ್ರಾಯಿಡ್ ಮೊಬೈಲ್ ಫೋನ್ ಐಎಂಇಐ 862853053184130/ 862853053184122 ವಶಕ್ಕೆ ಪಡೆದುಕೊಂಡಿರುತ್ತದೆ. ಆರೋಪಿಯು ಅಕ್ರಮವಾಗಿ ಹಣ ಸಂಪಾದನೆ ಮಾಡುವ ಉದ್ದೇಶದಿಂದ ವನ್ಯ

ಜೀವಿ ಪ್ರಾಣಿಗಳ ವಸ್ತುಗಳನ್ನು ಸಂಗ್ರಹಿಸಿ ಮಾರಾಟ ಮಾಡುವುದು ಕಂಡು ಬಂದಿದ್ದು ಈ ಬಗ್ಗೆ ಕ್ರಮ ಜರುಗಿಸಲು ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ವರದಿ ನೀಡಿದ್ದು ಹೆಬ್ಬಾಳ ಪೊಲೀಸ್ ಠಾಣೆ ವನ್ಯಜೀವಿ ಅಪರಾಧ ವರದಿ ಸಂಖ್ಯೆ: 01/2022 ಕಲಂ 9, 39, 40, 48ಎ, 49ಬಿ, 50, 51, 55(ಬಿ) 57 WLP Act ಪ್ರಕಾರ ಕೇಸು ದಾಖಲಾಗಿದ್ದು, ಸದರಿ ಪ್ರಕರಣದಲ್ಲಿ ಎ-1 ಆರೋಪಿಯಾದ ಸೆಂದಿಲ್ ಈತನನ್ನು ಮಾನ್ಯ 1ನೇ ಎ.ಸಿ.ಎಂ.ಎಂ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಆರೋಪಿಯನ್ನು ನ್ಯಾಯಾಂಗ ಬಂದನಕ್ಕೆ ಒಪ್ಪಿಸಲಾಗಿರುತ್ತದೆ.

ಈ ಪ್ರಕರಣದ ಹೆಚ್ಚಿನ ತನಿಖೆಯ ಸಲುವಾಗಿ, ದಿನಾಂಕ 19/12/2022 ರಂದು ಸದರಿ ಪ್ರಕರಣದ ಕಡತವನ್ನು ಹೆಬ್ಬಾಳ ಪೊಲೀಸ್ ಠಾಣೆಯಿಂದ ಸಿಸಿಬಿ ಘಟಕ ಮಹಿಳಾ ಮತ್ತು ಸಂರಕ್ಷಣಾ ದಳಕ್ಕೆ ವರ್ಗಾವಣೆ ನೀಡಿದ್ದು, ಹಾಲಿ ಸಿಸಿಬಿ ಘಟಕದ ಮಹಿಳಾ ಸಂರಕ್ಷಣಾ ದಳದಲ್ಲಿ ತನಿಖೆಯನ್ನು ಕೈಗೊಂಡಿರುತ್ತದೆ.

ದಿನಾಂಕ:19-12-2022 ರಂದು ಎ1 ಆರೋಪಿಯಾದ ಸೆಂದಿಲ್ ಈತನನ್ನು ಪೊಲೀಸ್ ಬಂಧನಕ್ಕೆ ಪಡೆದುಕೊಂಡಿರುತ್ತದೆ. ಪ್ರಕರಣದ ತನಿಖೆಯನ್ನು ಮುಂದುವರೆಸಿ, ದಿನಾಂಕ 21.12.2022 ಎ1-ಆರೋಪಿಯ ವರ್ತಮಾನದ ಮೇರೆಗೆ ಸಿಸಿಬಿ ಅಧಿಕಾರಿಗಳು, ಪಂಚರೊಂದಿಗೆ ದಾವಣಗೆರೆ ಜಿಲ್ಲೆ, ಅನೆಕೊಂಡ, ಬೊಂಬು ಬಜಾರ್, ಕಲ್ಲೇಶ್ವರ ರೈಸ್ ಮಿಲ್, ಫಾರಂ ಹೌಸ್‌ನಲ್ಲಿ ಚುಕ್ಕೆ ಜಿಂಕೆ ಮತ್ತು ಕೃಷ್ಣಮೃಗದ ಮೂಳೆಗಳನ್ನು ಹೂತಿಟ್ಟ ಜಾಗವನ್ನು ಪರಿಶೀಲನೆ ಮಾಡುವ ವೇಳೆಯಲ್ಲಿ ಸದರಿ ಫಾರಂ ಹೌಸ್‌ನಲ್ಲಿ ಜೀವಂತ ಚುಕ್ಕೆ ಜಿಂಕೆ-7, ಜೀವಂತ ಕೃಷ್ಣಮೃಗ-10, ಕಾಡು ಹಂದಿ-7, ಮುಂಗುಸಿ-3, ಜೀವಂತ ನರಿ-2 ಕಂಡು ಬಂದಿರುತ್ತದೆ. ಕೂಡಲೇ ದಾವಣಗೆರೆ ಅರಣ್ಯ ಸಂರಕ್ಷಣಾ ಅಧಿಕಾರಿಯವರಿಗೆ ಮಾಹಿತಿ ನೀಡಿ ಸ್ಥಳಕ್ಕೆ ಬರಮಾಡಿಕೊಂಡು ಜೀವಂತ ವನ್ಯ ಜೀವಿಗಳಿರುವ ಬಗ್ಗೆ ವರದಿ ನೀಡಲಾಗಿರುತ್ತದೆ. ನಂತರ ಅರಣ್ಯ ಅಧಿಕಾರಿಗಳ ಮುಂದೆ ಕೃಷ್ಣಮೃಗದ ಮೂಳೆಗಳನ್ನು ಹೂತಿಟ್ಟ ಜಾಗವನ್ನು ಆರೋಪಿಯು ತೋರಿಸಿದ ಮೇರೆಗೆ ಪಂಚರ ಸಮಕ್ಷಮ ಕೃಷ್ಣಮೃಗದ ಮೂಳೆಗಳನ್ನು ಅಮಾನತ್ತು ಪಡಿಸಿಕೊಳ್ಳಲಾಗಿರುತ್ತದೆ. ಎ-4 ಆರೋಪಿಯಾದ ಅಂಜನಿ @ ಆಂಜಿನಪ್ಪ ಬಿನ್ ಚೌಡಪ್ಪ, 24 ವರ್ಷ, ಬೇತೂರು ರಸ್ತೆ, ಕೊರಚರ ಹಟ್ಟಿ, ಇಂದಿರಾನಗರ, ದಾವಣಗೆರೆ, ಈತನನ್ನು ದಾವಣಗೆರೆಯಲ್ಲಿ ಪತ್ತೆಮಾಡಿ ವಶಕ್ಕೆ ಪಡೆದುಕೊಳ್ಳಲಾಗಿರುತ್ತದೆ. ದಿನಾಂಕ 22.12.2022 ರಂದು ಎ-4 ಆರೋಪಿ ಅಂಜನಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿ ಆರೋಪಿಯನ್ನು ಹೆಚ್ಚಿನ ವಿಚಾರಣೆಗೆ ಪೊಲೀಸ್ ಬಂಧನಕ್ಕೆ ಪಡೆದುಕೊಂಡಿರುತ್ತದೆ. ಪ್ರಕರಣದಲ್ಲಿ ಒಟ್ಟು 04 ಜನ ಆರೋಪಿಗಳು ಪ್ರಸ್ತುತ ಎ-1 ಆರೋಪಿ ಸೆಂಧಿಲ್ ಮತ್ತು ಎ-4 ಆರೋಪಿ ಅಂಜನಿ ಪೊಲೀಸ್ ಬಂಧನದಲ್ಲಿದ್ದು, ತಲೆ ಮರೆಸಿಕೊಂಡಿರುವ ಎ-2 ಆರೋಪಿ ಮಾರಿಯಪ್ಪ ಮತ್ತು ಎ-3 ಆರೋಪಿ ಸುಂಚ @ ಕಾಡುಸುಂಚ ರವರುಗಳ ಪತ್ತೆಕಾರ್ಯ ಮುಂದುವರೆದಿದ್ದು, ಪ್ರಸ್ತುತ ಪ್ರಕರಣವು ತನಿಖೆಯಲ್ಲಿರುತ್ತದೆ.

ಮುಂದುವರೆದು, ಅನಧಿಕೃತವಾಗಿ ಸಾಕಾಣಿಕೆ ಮಾಡುತ್ತಿರುವ ವನ್ಯ ಪ್ರಾಣಿಗಳನ್ನು ವಲಯ ಅರಣ್ಯಾಧಿಕಾರಿ, ದಾವಣಗೆರೆ ವಲಯ ರವರ ವಶಕ್ಕೆ ನೀಡಲಾಗಿದ್ದು, ಸದರಿ ಪ್ರಾಣಿಗಳನ್ನು ಇಂದಿರಾ ಪ್ರಿಯದರ್ಶಿನಿ ಪ್ರಾಣಿ ಸಂಗ್ರಹಾಲಯ, ಆನಗೋಡು ಇಲ್ಲಿಗೆ ನುರಿತ ವೈಧ್ಯಾಧಿಕಾರಿಯವರ ಸೂಕ್ತ ನಿಗಾವಣೆಯಲ್ಲಿ ಸ್ಥಳಾಂತರಿಸಲಾಗಿರುತ್ತದೆ.

ಸಂಖ್ಯೆ: ಹೆಚ್‌ಡಿ 80 ಪಿಸಿಕ್ಯೂ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು